ರಾಜ್ಯದಲ್ಲಿ ಆಶ್ರಯ ಯೋಜನೆಯ ಮನೆಗಳು

138 (180) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1996-97 ಹಾಗೂ 1997-98ನ (31-12-97 ರವರೆಗೆ) ಆಶ್ರಯ ವಿತರಣೆ ಮಾಡಬೇಕಾದ ನಿವೇಶನಗಳು ಎಷ್ಟು; ವಿತರಣೆ ಮಾಡಿರುವ ನಿವೇಶನಗಳೆಷ್ಟು;

ಆ) ಈ ಎರಡು ವರ್ಷಗಳಲ್ಲಿ ಯಾವ ಜಿಲ್ಲೆಗಳ ನಿವೇಶನಗಳ ವಿತರಣೆಯ ಸಾಧನೆಯು ಶೂನ್ಯವಾಗಿದೆ ಹಾಗೂ ಇದಕ್ಕೆ ಕಾರಣವೇನು

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು)

ಅ) 1996-97 ಹಾಗೂ 1997-98 (31-12-97 ರವರೆಗೆ) ಆಶ್ರಯ ಯೋಜನೆಯಲ್ಲಿ ವಿತರಣೆ ಮಾಡಬೇಕಾದ ನಿವೇಶನಗಳು ಮತ್ತು ವಿತರಣೆ ಮಾಡಿರುವ ನಿವೇಶನಗಳ ವಿವರಗಳು ಕೆಳಕಂಡಂತಿದೆ.

	ವಿತರಣೆ ಮಾಡಬೇಕಾದ ನಿವೇಶನಗಳು			ವಿತರಣೆ ಮಾಡಿರುವ ನಿವೇಶನಗಳು		
	ಗ್ರಾಮೀಣ	ನಗರ	ಒಟ್ಟು	ಗ್ರಾಮೀಣ	ನಗರ	ಒಟ್ಟು
1996-97	142192	65134	207326	101950	17755	119705
1197-98	100000	50000	150000	22214	547	22761

ಆ) 1996-97 ಮತ್ತು 1997-98ರ ಈ ಎರಡು ವರ್ಷಗಳಲ್ಲಿ ಈ ಕೆಳಕಂಡ ಜಿಲ್ಲೆಗಳಲ್ಲಿ ನಿವೇಶನಗಳು ವಿತರಣೆಯ ಸಾಧನೆ ಶೂನ್ಯವಾಗಿದೆ.

1996-97		1997-97	
ಗ್ರಾಮೀಣ	ನಗರ	ಗ್ರಾಮೀಣ	ನಗರ
ಕೊಡಗು	ಬೆಂಗಳೂರು	ಬೆಂಗಳೂರು	ಬೆಂಗಳೂರು
	ಮೈಸೂರು	ಶಿವಮೊಗ್ಗ	ಬೆಂಗಳೂರು (ಗ್ರಾ)
	ಕೊಡಗು	ಚಿಕ್ಕಮಗಳೂರು	ಚಿತ್ರದುರ್ಗ

1	2	3	4
	ಮಂಡ್ಯ	ಕೊಡಗು	ಕೋಲಾರ
	ಬಳ್ಳಾರಿ		ಶಿವಮೊಗ್ಗ
			ತುಮಕೂರು
			ಮೈಸೂರು
			ಚಿಕ್ಕಮಗಳೂರು
			ದಕ್ಷಿಣ ಕನ್ನಡ
			ಕೊಡಗು, ಮಂಡ್ಯ
			ಧಾರವಾಡ, ಉತ್ತರ
			ಕನ್ನಡ, ಗುಲ್ಬರ್ಗಾ
			ಬೀದರ್, ಬಳ್ಳಾರಿ
			ರಾಯಚೂರು.

1996-97ನೇ ಸಾಲಿನಲ್ಲಿ ಮತ್ತು 1997-98ನೇ ಸಾಲಿನಲ್ಲಿ ಮೇಲೆ ನಮೂದಿಸಿರುವ ಜಿಲ್ಲೆಗಳಲ್ಲಿ ಪ್ರಗತಿ ಶೂನ್ಯವಾಗಿದೆ. ನಗರ:ಪಟ್ಟಣ ಪ್ರದೇಶಗಳಲ್ಲಿ ಹಾಗೂ ಕೆಲವು ನಿರ್ದಿಷ್ಟ ಜಿಲ್ಲೆಗಳಲ್ಲಿ ಸರ್ಕಾರಿ ಜಮೀನು ಲಭ್ಯವಿರುವುದಿಲ್ಲ. ಭೂಮಾಲೀಕರು ತಮ್ಮ ಜೀವನಕ್ಕೆ ಜಮೀನನ್ನು ಏಕೈಕ ಆಧಾರವನ್ನಾಗಿ ಸಂಪೂರ್ಣ ಅವಲಂಭಿಸಿರುವುದರಿಂದ, ಒಂದು ವೇಳೆ ಸ್ವಾಧೀನ ಕ್ರಮ ಕೈಗೊಂಡಲ್ಲಿ ರೈತರು ಬೀದಿ ಪಾಲಾಗುವ ಸಂಭವ ಹೆಚ್ಚಾಗಿರುವುದರಿಂದ ಇದನ್ನು ಮಾನವೀಯ ದೃಷ್ಟಿಯಿಂದ ಪರಿಗಣಿಸಿ, ಜಮೀನಿನ ಮಾಲೀಕರ ಮನಪೊಲಿಸಿ, ಸಂಧಾನದ ಮೂಲಕ ಮಾರುಕಟ್ಟೆ ಬೆಲೆಗೆ ಖರೀದಿಸಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ಆದರೂ ಬೆಂಗಳೂರು ಮೈಸೂರು, ಮಂಡ್ಯ, ಚಿಕ್ಕಮಗಳೂರು, ಶಿವಮೊಗ್ಗ, ಮಂಗಳೂರು ಇಂತಹ ಪ್ರಮುಖ ಜಿಲ್ಲೆಗಳಲ್ಲಿ ಭೂಮಿಯ ಬೆಲೆ ಗಗನಕ್ಕೇರಿದ್ದು, ಅಪರವಾದ ಹಣವನ್ನು ವೆಚ್ಚ ಮಾಡಬೇಕಾಗುತ್ತದೆ. 97-98ರಲ್ಲಿ ಲೋಕಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ಫಲಾನುಭವಿಗಳ ಆಯ್ಕೆ ಮಾಡುವುದನ್ನು ಸ್ಥಗಿತಗೊಳಿಸಲಾಗಿತ್ತು. ಇನ್ನು ಮುಂದೆ ಆ ಬಗ್ಗೆ ಕ್ರಮ ವಹಿಸಲು ಮತ್ತು ಪ್ರಗತಿ ಸಾಧಿಸಲು ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ.